ಮಂಗಳೂರಿನ ಅಂಬೇಡ್ಕರ್ ಭವನ

1515(2055)

ಶ್ರೀ ಯೋಗೀಶ್‌ಭಟ್(ಮಂಗಳೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಗಳೂರಿನ ಜಿಲ್ಲಾ ಕೇಂದ್ರದಲ್ಲಿರುವ ಅಂಬೇಡ್ಕರ್ ಭವನದ ಕಟ್ಟಡದ ನಿರ್ಮಾಣ ಕಾರ್ಯ ಯಾವ ಯಾವ ಹಂತದಲ್ಲಿದೆ?

ಆ) ಅದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಇ) ಇದಕ್ಕಾಗಿ ಬಿಡುಗಡೆ ಮಾಡಲಾದ ಹಣ ಎಷ್ಟು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ(ಸಮಾಜ ಕಲ್ಯಾಣ ಸಚಿವರು):

ಅ) ಮಂಗಳೂರು ಜಿಲ್ಲಾ ಕೇಂದ್ರದಲ್ಲಿರುವ ಅಂಬೇಡ್ಕರ್ ಭವನವನ್ನು ನಿವೇಶನದ ಟೋಪೋಗ್ರಫಿಗೆ ಅನುಗುಣವಾಗಿ ಕಟ್ಟಡದ ನಕ್ಷೆ ರಚನೆಯಾಗಿದ್ದು ಅದರಂತೆ ಮುಂದಿನ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಾರಂಭದಲ್ಲಿ ವಾಣಿಜ್ಯ ಮಳಿಗೆಗಳನ್ನು ರೂ.77.40 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಸದರಿ ಭವನದ ರಚನೆ ಕೆಲಸವು ವಾಣಿಜ್ಯ ಮಳಿಗೆ ನಿರ್ಮಾಣದ ಮಟ್ಟದಲ್ಲಿಯೇ ಇರುವುದಾಗಿಯೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ದಿನಾಂಕ 30-6-99ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಆ) ಸರ್ಕಾರಿ ಆದೇಶ ಸಂಖ್ಯೆ. ಸಕಇ 364 ಪಕವಿ 95 ದಿನಾಂಕ 22-12-95 ರಲ್ಲಿ ಮಂಗಳೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನಕ್ಕೆ 10.00 ಲಕ್ಷ ರೂ.ಗಳು ಮಂಜೂರಾತಿಯಾಗಿರುತ್ತದೆ. ಆದರೆ ಜಿಲ್ಲಾಧಿಕಾರಿಗಳು ಮಂಗಳೂರು ಇವರು ಮಹಾನಗರಪಾಲಿಕೆ ಮತ್ತು ಜಿಲ್ಲಾ ಪಂಚಾಯತ್, ಮಂಗಳೂರು ಇವರ ಜಂಟಿ ಆಶ್ರಯದಲ್ಲಿ 156.00 ಲಕ್ಷ ರೂ.ಗಳಿಗೆ ಅಂದಾಜುವೆಚ್ಚ ತಯಾರಿಸಿದ್ದು, ಮೊದಲನೆಯ ಹಂತದಲ್ಲಿ 77.40 ಲಕ್ಷ ರೂ.ಗಳ ವೆಚ್ಚದಲ್ಲಿ ವಾಣಿಜ್ಯ ಮಳಿಗೆಯನ್ನು ನಿರ್ಮಾಣ ಮಾಡಿದ್ದು 78.60 ಲಕ್ಷ ರೂ.ಗಳ ಹಣವನ್ನು ಭವನಕ್ಕಾಗಿ ಭರಿಸಬೇಕಾಗಿರುತ್ತದೆ. ಹಣದ ಕೊರತೆಯಿಂದ ಭವನದ ಕಾಮಗಾರಿಕೆ ಪ್ರಾರಂಭಿಸಲಾಗಿಲ್ಲವೆಂದು ಹಾಗೂ ಹಣದ ಲಭ್ಯತೆ ಆಧಾರದ ಮೇಲೆ ಭವನದ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದೆಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ದಿನಾಂಕ 30-6-99 ರಂದು ವರದಿಮಾಡಿರುತ್ತಾರೆ.

ಇ) ಸರ್ಕಾರಿ ಆದೇಶ ಸಂಖ್ಯೆ.ಸಕಇ 364 ಪಕವಿ 95 ದಿನಾಂಕ 22-12-95ರಲ್ಲಿ

ಮಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂಬೇಡ್ಕರ್ ಭವನದ ನಿರ್ಮಾಣಕ್ಕಾಗಿ ಧನಸಹಾಯ ರೂಪದಲ್ಲಿ ರೂ. 10.00 ಲಕ್ಷಗಳನ್ನು ನೀಡಲು ನಿರ್ದೇಶಿಸಿದ್ದು, ಅದರಂತೆ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶಿಕಾರಿಪುರ ಪುರಸಭೆಯಲ್ಲಿ ಹೊಸ ಲೇಔಟ್‌ಗಳನ್ನು ಮಾಡುವಾಗ ಅಭಿವೃದ್ಧಿ ಶುಲ್ಕ ನಿಗದಿಪಡಿಸುವುದು.

1516(2075)

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ): ಮಾನ್ಯ ಪೌರಾಡಳಿತ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕಾರಿಪುರ ಪುರಸಭೆಯಲ್ಲಿ ಹೊಸ ಲೇ ಔಟ್‌ಗಳನ್ನು ಮಾಡುವಾಗ ಅಭಿವೃದ್ಧಿ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ನೀಡಿರುವ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನ ಸಭೆಯಲ್ಲಿ ನೀಡಿರುವ ಭರವಸೆಯನ್ನು ಈಡೇರಿಸದಿರುವುದಕ್ಕೆ ಕಾರಣಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್(ಪೌರಾಡಳಿತ ರಾಜ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ ನಅಇ 173 ಜಿಇಎಲ್ 99 ದಿ: 30-6-99ರಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ದಿ: 24-3-98 ರಂದು ಹೊರಡಿಸಿದ ಆದೇಶವನ್ನು ಎತ್ತಿಹಿಡಿದು ಶಿಕಾರಿಪುರ ಪುರಸಭೆಯ ವ್ಯಾಪ್ತಿಯಲ್ಲಿಯ ಹೊಸ ಬಡಾವಣೆಗಳ ಕುರಿತಂತೆ ಅಭಿವೃದ್ಧಿ ಶುಲ್ಕವನ್ನು ಪ್ರತಿ ಚದರ ಅಡಿಗೆ ರೂ 3-00 ನ್ನು ನಿಗಧಿಪಡಿಸಿ ಆದೇಶ ಹೊರಡಿಸಲಾಗಿದೆ.

ಅಂಬೇಡ್ಕರ್ ಯೋಜನೆಗೆ ನಿಗದಿಪಡಿಸಿದ ಹಣ.

1517(2172)

ಶ್ರೀ ಪೂಜಾರಿ ಪ್ರಹ್ಲಾದ್ ಹನುಮಂತಪ್ಪ (ಬಾಗಲಕೋಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1996-97, 1997-98, 1998-99 ಹಾಗೂ 1999-2000ನೇ ಸಾಲುಗಳಲ್ಲಿ ಅಂಬೇಡ್ಕರ್ ಯೋಜನೆಗಾಗಿ ನಿಗದಿಪಡಿಸಿದ ಹಣವೆಷ್ಟು? ಬಿಡುಗಡೆ ಮಾಡಿದ ಹಣವೆಷ್ಟು?